ಓಂ

# ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly August : 2014 Vol. :1 Issue : 6 5116/ಜಯ ಸಂ ಆಗಸ್ಟ್ 2014 ಪುಟಗಳು : 8

## ಪದವಿ ವಿಭಾಗದ ವಿದ್ಯಾರ್ಥಿಸಂಘದ ಉದ್ಘಾಟನೆ



ಪ್ರಣವ ವಿದ್ಯಾರ್ಥಿ ಸಂಘದ ಉದ್ಘಾಟನೆ

“ನಾಯಕತ್ವ ಇದೊಂದು ತೆರನಾದ ಕೌಶಲ. ನಾಯಕತ್ವಕ್ಕೆ ಬೇಕಾದುದು ನಿರ್ದಿಷ್ಟವಾದ ಗುರಿ. ಆ ಗುರಿ ಸಾಧಿಸಲು ನಾಯಕರಿಗೆ ಪ್ರಬಲವಾದ , ಉತ್ತಮವಾದ ಸಂಘಟನೆ ಶಕ್ತಿಯ ಅಗತ್ಯವಿದೆ. ಆಗ ಮಾತ್ರ ನಾಯಕ ಯಶಸ್ಸಿನ ಗುರಿ ತಲುಪಲು ಸಾಧ್ಯ.” – **ಡಾ| ಶಿವಶರಣ್,** ನಿರ್ದೇಶಕರು, ನಮ್ಮ ಟಿ.ವಿ. ಮತ್ತು ನೇತಾಜಿ ನರ್ಸಿಂಗ್ ಕಾಲೇಜು



ಪ್ರೌಢಶಾಲಾ ಮುಖ್ಯಶಿಕ್ಷಕ ವಸಂತ ಮಾಧವ ಸಭಾಧ್ಯಕ್ಷತೆ ವಹಿಸಿ, ವಿವಿಧ ಸಂಘಗಳಿಗೆ ಚಾಲನೆ ನೀಡಿ ಹಿರಿಯರನ್ನು ರಾಷ್ಟ್ರವನ್ನು ಪ್ರೀತಿಸಬೇಕು. ನಮ್ಮ, ನಮ್ಮದು ಎನ್ನುವ ಅಭಿಮಾನ ಬೆಳೆದಾಗ ಮಾತ್ರ ನಾಯಕತ್ವ ಬಲವಾಗುವುದು ಎಂದರು.

. . . . . . . . . . . . . . . . . . . . . . . . . . . . . . . . . . . .

## ಪ್ರೌಢಶಾಲಾ ಶೈಕ್ಷಣಿಕ ಪ್ರವಾಸ 20–7–2014

ಈ ಶೈಕ್ಷಣಿಕ ವರ್ಷದ 10ನೇ ತರಗತಿಯ ವಿದ್ಯಾರ್ಥಿಗಳ ಪ್ರವಾಸವನ್ನು ಮಡಿಕೇರಿ ಓಂಕಾರೇಶ್ವರ ದೇವಸ್ಥಾನ, ಅಬ್ಬಿ ಫಾಲ್ಸ್, ಮಡಿಕೇರಿ ಕೋಟೆ, ಅರಮನೆ ಪ್ರಾಚ್ಯ ವಸ್ತುಸಂಗ್ರಹಾಲಯ ಹಾಗೂ ಕುಶಾಲನಗರದ ಕಾವೇರಿ ನಿಸರ್ಗಧಾಮಕ್ಕೆ ಹಮ್ಮಿಕೊಳ್ಳಲಾಗಿತ್ತು.

ಮಡಿಕೇರಿ ಜಿಲ್ಲಾ ಸಂಪರ್ಕ ಪ್ರಮುಖ್ ಶ್ರೀ ಸೋಮೇಶ್ ಹಾಗೂ ಅವರ ತಂಡದವರು ಜೊತೆಗಿದ್ದು ಸಹಕರಿಸಿದರು.

## ತಾಯೆ ನಿನಗೆ ನಿತ್ಯೋತ್ಸವ.......



ಚಿಂತನರಶ್ಮಿ

# ಪ್ರಭಾವವಲ್ಲ, ಯೋಗ್ಯತೆಯೇ ಮಾನದಂಡ

ಲಾಲ್ ಬಹಾದ್ದೂರ್ ಶಾಸ್ತ್ರಿ ಪ್ರಧಾನಮಂತ್ರಿ ಆದರು, ಅವರ ಹಿರಿಯ ಮಗ ಹರಿಕೃಷ್ಣ ಆಗ ಅಶೋಕ ಲೈಲಾಂಡ್ ಕಂಪೆನಿಯಲ್ಲಿ ಕೆಲಸಮಾಡುತ್ತಿದ್ದ. ಶಾಸ್ತ್ರಿಯವರು ಪ್ರಧಾನ ಮಂತ್ರಿಯೊಡನೆ ಕಂಪೆನಿಯು ಹರಿಕೃಷ್ಣನಿಗೆ ಸೀನಿಯರ್ ಜನರಲ್ ಮ್ಯಾನೇಜರ್ ಆಗಿ ಬಡ್ತಿ ನೀಡಿತು. ಹರಿಕೃಷ್ಣ ಇದನ್ನು ಕನಸಿನಲ್ಲೂ ಎಣಿಸಿರಲಿಲ್ಲ.

ಒಂದು ದಿನ ಬೆಳಗ್ಗೆ ತಿಂಡಿ ತಿನ್ನುವಾಗ ಮಗ ತಂದೆಯ ಬಳಿ ಈ ಸಂಗತಿ ಹೇಳಿದ. ಇದನ್ನು ಕೇಳಿದ ಕೂಡಲೇ ಶಾಸ್ತ್ರೀಜಿ ಗಂಭೀರವಾದರು. ಬಡ್ತಿ ನೀಡಿದ್ದು ನಿನ್ನ ಕೆಲಸ ನೋಡಿ ಅಲ್ಲ, ಬದಲಾಗಿ ನನ್ನ ಪದವಿ ನೋಡಿ. ಮುಂದೆ ಎಂದಾದರೂ ಆ ಕಂಪೆನಿಯವರು ಯಾವುದಾದರೂ ಕೆಲಸಕ್ಕೆ ನನ್ನ ಬಳಿ ಬಂದರೆನ್ನು, ಆಗ ನಾನು ಅವರಿಗೆ ನ್ಯಾಯಸಮ್ಮತವಾಗಿ ಕೆಲಸ ಮಾಡಿಕೊಟ್ಟರೂ ಜನರೇನೆಂದುಕೊಂಡಾರು? ನಿನ್ನ ಸಹೋದ್ಯೋಗಿಗಳು ಈ ಕುರಿತು ಏನು ಭಾವಿಸಿಯಾರು? ಎಂದರು.

ಹರಿಕೃಷ್ಣ ಏನೂ ಮಾತನಾಡಲಿಲ್ಲ. ಬಡ್ತಿ ದೊರೆತ ಸಂತಸ ಜರ್ರನೆ ಇಳಿದು ಹೋಗಿತ್ತು. ಹರಿಕೃಷ್ಣ, ನೀನು ಆ ಕಂಪೆನಿಗೆ ರಾಜೀನಾಮೆ ಕೊಡು. ನಾನು ಪ್ರಧಾನಿ ಆಗಿರುವವರೆಗೂ ಅಲ್ಲಿ ಕೆಲಸ ಮಾಡಬೇಡ ಎಂದು ಶಾಸ್ತ್ರೀಜಿ ಮಗನಿಗೆ ಹೇಳಿದರು. ಹರಿಕೃಷ್ಣ ತಂದೆಯ ಮಾತನ್ನು ಪಾಲಿಸಿದ.

## ವಿದ್ಯಾಕೇಂದ್ರ

ವಿದ್ಯಾಭಾರತಿ ಕರ್ನಾಟಕ ಪ್ರಾಂತದ ದ.ಕ. ಜಿಲ್ಲಾ ಘಟಕದ ವತಿಯಿಂದ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರ ಶೈಕ್ಷಣಿಕ ಸಹಮಿಲನ ಕಾರ್ಯಕ್ರಮವು ಕೊಡಿಯಾಲಬೈಲಿನ ಶಾರದಾ




ವಿದ್ಯಾಲಯದಲ್ಲಿ ನಡೆಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘದ ದಕ್ಷಿಣ ಕ್ಷೇತ್ರೀಯ ಸಂಪರ್ಕ ಪ್ರಮುಖ್ ಡಾ। ಕಲ್ಲಡ್ಕ ಪ್ರಭಾಕರ ಭಟ್ ಕಾರ್ಯಕ್ರಮ ಉದ್ಘಾಟಿಸಿದರು. ಶಿಕ್ಷಕರಾದವರು ತಮ್ಮ ಆಚಾರ ವಿಚಾರ ಉಡುಗೆ ತೊಡುಗೆಗಳಲ್ಲಿ ಕೇವಲ ತಮ್ಮ ವಿದ್ಯಾರ್ಥಿಗಳಿಗಷ್ಟೇ ಅಲ್ಲ ಸಮಾಜಕ್ಕೂ ಮಾರ್ಗದರ್ಶನ ಮಾಡಬಲ್ಲ ಆದರ್ಶ ಗುಣಗಳನ್ನು ಹೊಂದಿರಬೇಕು. ವಿದ್ಯಾರ್ಥಿಗಳಲ್ಲಿ ಉತ್ತಮ ಚಾರಿತ್ರ್ಯ ನಿರ್ಮಾಣ ಮಾಡುವುದರೊಂದಿಗೆ ದೇಶಭಕ್ತಿ, ದೈವಭಕ್ತಿಗಳನ್ನು ಮೂಡಿಸುವ ಮಹರ್ಷಿ ಪ್ರಣೀತ ಶಿಕ್ಷಣಕ್ರಮದ ಮೂಲಕ ಪ್ರೇರಣೆ ನೀಡಬೇಕು ಎಂಬುದಾಗಿ ಅವರು ಹೇಳಿದರು. ವಿದ್ಯಾಭಾರತಿ ಧ್ಯೇಯೋದ್ದೇಶಗಳನ್ನು ದ.ಕ. ಜಿಲ್ಲಾ ಅಧ್ಯಕ್ಷ ಪ್ರೊ. ಎಂ.ಬಿ.ಪುರಾಣಿಕ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಹೇಳಿದರು.

ಸಾಮಾಜಿಕ ಕಾರ್ಯಕರ್ತ ಶ್ರೀ ನಿತ್ಯಾನಂದ ವಿವೇಕವಂಶಿಯವರು 'ಪ್ರಾಚೀನ ಭಾರತ–ಆಧುನಿಕ ಭಾರತ'ವಿಷಯದ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಬಳಿಕ ಶಿಕ್ಷಕರು ವಿವಿಧ ಗುಂಪುಗಳಲ್ಲಿ ನಡೆದ ಚರ್ಚಾ ಕೂಟದಲ್ಲಿ ಭಾಗವಹಿಸಿದರು. ವಿದ್ಯಾಭಾರತಿ ಕರ್ನಾಟಕದ ಸಂಘಟನಾ ಕಾರ್ಯದರ್ಶಿ ಶ್ರೀ ಜಿ. ಆರ್. ಜಗದೀಶ್ ಸಮಾರೋಪ ಭಾಷಣದಲ್ಲಿ ಪ್ರಾಂತದ ವಿವಿಧ ಕಡೆ ನಡೆದ ವಿದ್ಯಾಭಾರತಿಯ ಚಟುವಟಿಕೆಗಳ ಬಗ್ಗೆ ತಿಳಿಸಿದರು. ವಿದ್ಯಾಭಾರತಿಯ ದ.ಕ. ಜಿಲ್ಲಾ ಘಟಕದ ಕಾರ್ಯದರ್ಶಿ ಶ್ರೀ ವಸಂತ ಮಾಧವರು ವೇದಿಕೆಯಲ್ಲಿ ಉಪಸ್ಥಿತರಿದ್ದು ಅಗತ್ಯ ನಿರ್ದೇಶನಗಳನ್ನು ನೀಡಿದರು.



ಶಾರದಾ ವಿದ್ಯಾಲಯದ ಉಪ–ಪ್ರಾಂಶುಪಾಲ ಶ್ರೀ ದಯಾನಂದ ಕಟೀಲ್ ಕಾರ್ಯಕ್ರಮ ನಿರ್ವಹಿಸಿದರು. ಪೆರ್ಲಂಪಾಡಿಯ ಶ್ರೀ ಷಣ್ಮುಖದೇವ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಲೋಕಯ್ಯ ವಂದನಾರ್ಪಣೆಗೈದರು.

ವಿವೇಕಾನಂದ ಪದವಿ ಪೂರ್ವ ವಿದ್ಯಾಲಯದ ಆತಿಥ್ಯದಲ್ಲಿ ಪದವಿ ಪೂರ್ವ ಶಿಕ್ಷಕ ಶಿಕ್ಷಕೇತರರ ಶೈಕ್ಷಣಿಕ ಸಹಮಿಲನವನ್ನು ಉದ್ಘಾಟಿಸಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಎಸ್.ಆರ್. ರಂಗಮೂರ್ತಿ ಅವರು ಮಾತನಾಡಿ, 'ವಿದ್ಯಾರ್ಥಿಗಳಿಗೆ ಸಂಸ್ಕಾರಯುತ ಶಿಕ್ಷಣ ಒದಗಿಸಬೇಕು. ಅಂಥ ಜವಾಬ್ದಾರಿ ಶಿಕ್ಷಕರ ಮೇಲಿದೆ. ಉನ್ನತ ವ್ಯಾಸಂಗ ಮಾಡಿದವರು ಕೂಡ ಭಯೋತ್ಪಾದಕ ಕೃತ್ಯಗಳಲ್ಲಿ ತೊಡಗಿಸಿಕೊಳ್ಳುವುದಕ್ಕೆ ಸಂಸ್ಕಾರ ರಹಿತ ಶಿಕ್ಷಣವೇ ಕಾರಣವಾಗಿದೆ' ಎಂದು ಅವರು ವಿವರಿಸಿದರು. ಕಾಲೇಜು ಸಂಚಾಲಕರಾದಜಯರಾಮ ಭಟ್ ಎಂ. ಟಿ. ಅವರುಅಧ್ಯಕ್ಷತೆ ವಹಿಸಿದ್ದರು. ವಿದ್ಯಾಭಾರತಿಯಜಿಲ್ಲಾ ಉಪಾಧ್ಯಕ್ಷ ಮಂಕುಡೆ ವೆಂಕಟ್ರಮಣರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಜಿಲ್ಲೆಯ 500 ಕ್ಕೂ ಅಧಿಕ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.ವಿವೇಕಾನಂದ ಪದವಿಪೂರ್ವ ವಿದ್ಯಾಲಯದವಿದ್ಯಾರ್ಥಿನಿಯರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಸಮಾರಂಭದಲ್ಲಿ ವಿದ್ಯಾಭಾರತಿಕರ್ನಾಟಕ ಘಟಕದ ಸಹಕಾರ್ಯದರ್ಶಿ ವಸಂತ ಮಾಧವರು ಪ್ರಸ್ತಾವನೆ ಮಾಡಿ, ಸ್ವಾಗತಿಸಿದರು. ಪ್ರಾಂಶುಪಾಲ ಜೀವನ್‌ದಾಸ್ ವಂದಿಸಿದರು. ಉಪನ್ಯಾಸಕಿ ಅಕ್ಷತಾ ಕಾರ್ಯಕ್ರಮ ನಿರೂಪಿಸಿದರು.

ಕಜಂಪಾಡಿ ಸುಬ್ರಹ್ಮಣ್ಯ ಭಟ್, ಲೀಲಾ ಉಪಾಧ್ಯಾಯ, ಪ್ರದೀಪ್‌ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದರು.


ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು : ನಾರಾಯಣ ಸೋಮಯಾಜಿ, ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
ಕಾರ್ಯನಿರ್ವಾಹಕ ಸಂಪಾದಕರು : ಮಹೇಶ ನೆಟ್ಲ
ಸಹಸಂಪಾದಕರು : ದಿವ್ಯಾಕುಮಾರಿ, ಕಾವ್ಯ, ಜ್ಯೋತಿ, ಚಂದ್ರಿಕಾ, ಶ್ರೀಮತಿ ವಿನುತ ಎಸ್.ಎನ್.
ವ್ಯವಸ್ಥಾಪಕ ಸಂಪಾದಕರು : ಸತೀಶ ಭಟ್, ಶಿವಗಿರಿ
ವಿನ್ಯಾಸ : ಕುಶಾಲಪ್ಪ ಅಮ್ಮೂರು

## ಶಿಶುಮಂದಿರಕ್ಕೆ ಭೇಟಿ

ದಿನಾಂಕ ; 4.7.2014 ಶುಕ್ರವಾರದಂದು ಶ್ರೀ ಭಾರತಿ ಅಲಂಕಾರು ಶಾಲೆಯ ಶಿಶುಮಂದಿರದ ಪುಟಾಣಿಗಳು ಮತ್ತು 1 ಮತ್ತು 2ನೇ ತರಗತಿಯ ಮಕ್ಕಳು ಅವರ ಪಾಲಕರು ಶ್ರೀರಾಮ ಶಿಶುಮಂದಿರದಲ್ಲಿ ನಡೆಯುವಂತಹ ಚಟುವಟಿಕೆಗಳನ್ನು ನೋಡಿ ನಂತರ ಪ್ರಾಥಮಿಕ ಶಾಲೆಗೆ ಭೇಟಿ ನೀಡಿದರು, ನಂತರ ಮಧ್ಯಾಹ್ನದ ಭೋಜನ ಸ್ವೀಕರಿಸಿ ತಮ್ಮ ಕ್ಷೇತ್ರಕ್ಕೆ ತೆರಳಿದರು. ಒಟ್ಟು 74 ಮಕ್ಕಳು ಮತ್ತು 52 ಪಾಲಕರು ಶ್ರೀರಾಮ ವಿದ್ಯಾಕೇಂದ್ರಕ್ಕೆ ಭೇಟಿ ನೀಡಿದರು.

## ಆಗತ ಸ್ವಾಗತ : 01.7.2014



ಶ್ರೀರಾಮ ಶಿಶುಮಂದಿರ ಹನುಮಾನ್ ನಗರ ಕಲ್ಲಡ್ಕ ಶಿಶುಮಂದಿರದ ಮಕ್ಕಳ ಆಗತ ಸ್ವಾಗತ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಮುಖ್ಯ ಅತಿಥಿಗಳಾಗಿ ಸಾವಿತ್ರಿ ವಸಂತ ಮಾದವ, ಶ್ರೀಮತಿ ಸತ್ಯವತಿ, ಶ್ರೀಮತಿ ಸುಧಾ ಭಟ್, ಶ್ರೀಮತಿ ಪ್ರೇಮನಾರಾಯಣ ಗೌಡ ಇವರು ಆಗಮಿಸಿದ್ದರು. ಬಂದಂತಹ ಅತಿಥಿಗಳು ಮೊದಲನೆಯದಾಗಿ ಮಕ್ಕಳಿಗೆ ಆರತಿಯನ್ನು ಬೆಳಗಿ, ತಿಲಕ ಅಕ್ಷತೆ ಹಾಕಿ, ಮಕ್ಕಳಿಗೆ ಕಥೆಯ ರೂಪದಲ್ಲಿ ಒಳ್ಳೆ ಸಹಕಾರದಿಂದ ಇರಬೇಕಾದರೆ ಹೇಗೆ ಇರಬೇಕು, ಸ್ನೇಹದಿಂದ ಬದುಕಬೇಕು ಎಂದು ಪ್ರಾಣಿ ಪಕ್ಷಿ ಉದಾಹರಣೆಯೊಂದಿಗೆ ತಿಳಿಸಿದರು. ಡಾ। ಕಮಲಾ ಭಟ್ ಇವರು ಅಧ್ಯಕ್ಷತೆ ವಹಿಸಿದ್ದು, ಸಮಯದ ಮಹತ್ವದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿ ಶುಭ ಹಾರೈಸಿದರು. ಒಟ್ಟು 116 ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಭ। ಚಿತ್ರಾ ಮಾತಾಜಿ ನಿರೂಪಿಸಿ ಭ। ಸವಿತಾ ಮಾತಾಜಿ ಸ್ವಾಗತಿಸಿ ಭ। ದಿವ್ಯಾ ಮಾತಾಜಿ ಧನ್ಯವಾದ ಅರ್ಪಿಸಿದರು.

## ಪಾಲಕರ ಸಭೆ : ದಿನಾಂಕ–02.07.2014



ಶ್ರೀರಾಮ ಶಿಶುಮಂದಿರ ಕಲ್ಲಡ್ಕದ ವಿದ್ಯಾರ್ಥಿಗಳ ಪಾಲಕರ ಸಭೆಯನ್ನು ನಡೆಸಲಾಯಿತು. ಸಭೆಯಲ್ಲಿ ಒಟ್ಟು 115 ಪಾಲಕರು ಭಾಗವಹಿಸಿದ್ದರು. ವಿದ್ಯಾರ್ಥಿಗಳು ಚಟುವಟಿಕೆಯ ಮೂಲಕ ಎಲ್ಲಾ ಕೆಲಸಗಳನ್ನು ಖುಷಿಯಿಂದ ಮಾಡುತ್ತಿರುವ ಬಗ್ಗೆ, ಮಕ್ಕಳಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಪುಟ್ಟ ಪುಟ್ಟ ಮಕ್ಕಳು ಶ್ಲೋಕ, ಭಜನೆ ಹಾಡುಗಳನ್ನು ಹಾಡುವುದರ ಬಗ್ಗೆ ತಮ್ಮ ಕೆಲಸಗಳನ್ನು ತಾವೇ ಮಾಡುವುದರ ಬಗ್ಗೆ ಪೋಷಕರು ಸಂತಸ ವ್ಯಕ್ತಪಡಿಸಿದರು. ಸಂಚಾಲಕ ಡಾ। ಪ್ರಭಾಕರ ಭಟ್ ಕಲ್ಲಡ್ಕ ಪೋಷಕರಿಗೆ ಸಂಸ್ಥೆಯ ಹಿನ್ನೆಲೆ, ಉದ್ದೇಶಗಳನ್ನು ತಿಳಿಸಿ ಮಾರ್ಗದರ್ಶನ ಮಾಡಿದರು. ವೇದಿಕೆಯಲ್ಲಿ ಅಧ್ಯಕ್ಷ ನಾರಾಯಣ ಸೋಮಯಾಜಿ, ಡಾ। ಕಮಲಾ ಭಟ್ ಉಪಸ್ಥಿತರಿದ್ದರು. ಭ। ದಿವ್ಯ ಸ್ವಾಗತಿಸಿ, ಶ್ರೀಮತಿ ಸತ್ಯವತಿ ವಂದಿಸಿ, ಶ್ರೀಮತಿ ವೀಣಾ ಕಾರ್ಯಕ್ರಮ ನಿರೂಪಿಸಿದರು.

## ಶ್ರೀಕೃಷ್ಣ ಶಿಶುಮಂದಿರ ಸಜಿಪ

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶ್ರೀಕೃಷ್ಣ ಶಿಶುಮಂದಿರ ಸಜಿಪದಲ್ಲಿ ಮಕ್ಕಳ ಮಕ್ಕಳ ಆಗತ ಸ್ವಾಗತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಮುಖ್ಯ ಅತಿಥಿಯಾಗಿ ಶ್ರೀಮತಿ ಡಾ। ಕಮಲಾ ಭಟ್ ಮತ್ತು ಶ್ರೀಮತಿ ಆಶಾ ಇವರು ಮಕ್ಕಳಿಗೆ ಆರತಿಯನ್ನು ಬೆಳಗಿದರು. ಶ್ರೀಮತಿ ಅರುಂಧತಿ ಇವರು ತಿಲಕ ಇಟ್ಟು, ಶ್ರೀಮತಿ ಗೋಪಿ ಗಾಯತ್ರಿ ಇವರು ಅಕ್ಷತೆಯನ್ನು ಹಾಕಿದರು. ನಂತರ ಎಲ್ಲಾ ಮಕ್ಕಳಿಗೆ ಶಿಶುಮಂದಿರದ ವತಿಯಿಂದ ಛತ್ರಿಗಳನ್ನು ವಿತರಿಸಲಾಯಿತು. ನಂತರ ಶ್ರೀಮತಿ ಡಾ। ಕಮಲಾ ಭಟ್ ಇವರು ಮಕ್ಕಳಿಗೆ ಕಥೆಯನ್ನು ಹೇಳಿ ಶುಭ ಹಾರೈಸಿದರು. ನಂತರ ಮಾತೆಯರಿಗೆ ಪ್ರತಿ ಗುರುವಾರ ಮಾತೃಮಂಡಳಿಗೆ ಬರುವಂತೆ ತಿಳಿಸಿದರು.

ಕಾರ್ಯಕ್ರಮದಲ್ಲಿ ಶಿಶುಮಂದಿರದ 20 ಮಕ್ಕಳು, 17 ತಾಯಂದಿರು ಭಾಗವಹಿಸಿದ್ದರು. ಶ್ರೀಮತಿ ಆಶಾ ಇವರು ಸ್ವಾಗತಿಸಿ ಶ್ರೀಮತಿ ಅನ್ನಪೂರ್ಣ ಇವರು ಧನ್ಯವಾದ ಅರ್ಪಿಸಿದರು.

## ಗುರುಪೂರ್ಣಿಮೆ : 12.7.2014

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ



ನಡೆಯುವ ಶಿಶುಮಂದಿರಗಳಲ್ಲಿ ಶನಿವಾರದಂದು ಬೆಳಗ್ಗೆ 10 ಗಂಟೆಗೆ ಗುರುಪೂರ್ಣಿಮೆ ಉತ್ಸವವನ್ನು ಆಚರಣೆ ಮಾಡಲಾಯಿತು. ಮೊದಲನೆಯದಾಗಿ ಮಕ್ಕಳು ಭಾರತಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆಯನ್ನು ಮಾಡಿದರು. ನಂತರ ಶ್ರೀರಾಮ ಶಿಶುಮಂದಿರ ಕಲ್ಲಡ್ಕ ಇಲ್ಲಿ ಭ। ಶೈನಿ ಮಾತಾಜಿ, ಶ್ರೀ ಗಣೇಶ ಶಿಶುಮಂದಿರ ಬೊಂಡಾಲ ಇಲ್ಲಿ ಶ್ರೀಮತಿ ವೀಣಾ, ಶ್ರೀಕೃಷ್ಣ ಶಿಶುಮಂದಿರ ಸಜಿಪ ಇಲ್ಲಿ ಶ್ರೀಮತಿ ಸಂಗೀತಾ, ಶ್ರೀಅಕ್ಕಮಹಾದೇವಿ ಶಿಶುಮಂದಿರ ಬಿ.ಸಿ.ರೋಡ್ ಇಲ್ಲಿ ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ, ಶ್ರೀ ಸರಸ್ವತಿ ಶಿಶುಮಂದಿರ ಶಂಭೂರು ಇಲ್ಲಿ ಶ್ರೀಮತಿ ಪನಿಪಾ ಇವರು ಮಕ್ಕಳಿಗೆ ಕಥೆಯನ್ನು ಹೇಳುವುದರ ಮೂಲಕ ಗುರುವಿನ ಮಹತ್ವವನ್ನು ತಿಳಿಸಿಕೊಟ್ಟರು. ನಂತರ ಮಕ್ಕಳಿಗೆ ಸಿಹಿಯನ್ನು ಹಂಚಲಾಯಿತು. ಶ್ರೀರಾಮ ಶಿಶುಮಂದಿರದಲ್ಲಿ 108 ಮಕ್ಕಳು, ಶ್ರೀ ಗಣೇಶ ಶಿಶುಮಂದಿರದಲ್ಲಿ 17 ಮಕ್ಕಳು, ಶ್ರೀಕೃಷ್ಣ ಶಿಶುಮಂದಿರದಲ್ಲಿ 21 ಮಕ್ಕಳು, ಶ್ರೀ ಅಕ್ಕಮಹಾದೇವಿ ಶಿಶುಮಂದಿರದಲ್ಲಿ 15ಮಕ್ಕಳು, ಶ್ರೀ ಸರಸ್ವತಿ ಶಿಶುಮಂದಿರದಲ್ಲಿ 12 ಮಕ್ಕಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಸಾಮೂಹಿಕ ಹುಟ್ಟುಹಬ್ಬ ಮತ್ತು ಭಜನೆ : 05.07.2014

ಪ್ರಾಥಮಿಕ ವಿಭಾಗದಲ್ಲಿ ನಡೆದ ಭಜನೆ ಮತ್ತು ಸಾಮೂಹಿಕ ಹುಟ್ಟುಹಬ್ಬದಲ್ಲಿ ಗೇರುಕಟ್ಟೆ ಉಮಾಶಿವ ಕ್ಷೇತ್ರದ ಮೊಕ್ತೇಸರರು ಹಾಗೂ ಶ್ರೀರಾಮ ಪ್ರಾಥಮಿಕ ವಿಭಾಗದ ಶಾಲಾಭಿವೃದ್ಧಿ ಸಮಿತಿಯ ಕೋಶಾಧಿಕಾರಿ ಶ್ರೀ ರಾಕೋಡಿ ಈಶ್ವರ ಭಟ್, ಇವರು ಮಾತಾನಾಡುತ್ತಾ ಶ್ರೀರಾಮ ಶಾಲೆಯಲ್ಲಿ ವಿದ್ಯಾಭ್ಯಾಸ ಪಡೆಯುತ್ತಿರುವ ನೀವೇ ಪುಣ್ಯವಂತರು, ಇಲ್ಲಿ ಉತ್ತಮ ಸಂಸ್ಕಾರ ಸಿಗುತ್ತದೆ. ಹುಟ್ಟುಹಬ್ಬವನ್ನು ಗಿಡನೆಡುವ ಮೂಲಕ ಆಚರಿಸುವ ಎಂದು ಶುಭಹಾರೈಸಿದರು.

ಇನ್ನೊರ್ವ ಅತಿಥಿ ವಿಜಯ ಬ್ಯಾಂಕ್ ನಿವೃತ್ತ ಮ್ಯಾನೇಜರ್ ಹಾಗೂ ಗೇರುಕಟ್ಟೆ ಉಮಾಶಿವ ಕ್ಷೇತ್ರದ ಕಾರ್ಯದರ್ಶಿ ಶ್ರೀ ಶ್ಯಾಮ್ ಭಟ್ ಇವರು ವಿದ್ಯಾರ್ಥಿಗಳಿಗೆ ಶುಭನುಡಿದರು.

ಪ್ರಾಥಮಿಕ ಶಾಲಾ ಮುಖ್ಯೋಪಾದ್ಯಾಯರು ಮಾತಾನಾಡುತ್ತಾ ಭಾರತ ದೇಶದಲ್ಲಿ ಮಹಾನ್ ಪುರುಷರ ಹುಟ್ಟುಹಬ್ಬವನ್ನು ಆಚರಿಸುತ್ತೇವೆ ಹಾಗೆ ಇಂದು ಹುಟ್ಟುಹಬ್ಬ ಆಚರಿಸಿಕೊಂಡ ಮಕ್ಕಳು ಅಂತಹ ಮಹಾಪುರುಷರು ಹಾಕಿಕೊಟ್ಟ ಹಾದಿಯಲ್ಲಿ ನಡೆಯುವ ಮೂಲಕ ಅವರಿಗೆ ಗೌರವ ಸಲ್ಲಿಸಬೇಕು ಎಂದು ನುಡಿದರು.

ಹುಟ್ಟುಹಬ್ಬ ಆಚರಿಸಿಕೊಂಡಿರುವ ವಿದ್ಯಾರ್ಥಿಗಳಿಗೆ ಗುರುವೃಂದದವರಿಂದ ಆರತಿ, ಅಕ್ಷತೆ, ತಿಲಕಧಾರಣೆ ಮಾಡಲಾಯಿತು. ಕಾರ್ಯಕ್ರಮಕ್ಕೆ ಶ್ವೇತಾ ಮಾತಾಜಿ ಸ್ವಾಗತಿಸಿ, ಸಸ್ಮಿತಾ ಮಾತಾಜಿ ವಂದಿಸಿ, ಪವಿತ್ರ ಮಾತಾಜಿ ನಿರೂಪಿಸಿದರು.

## ಶಾಲಾಸಂಸತ್ತು 12.07.2014




ಶಾಲಾ ಸಂಸತ್ತು ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾರತೀಯ ಜನತಾ ಪಕ್ಷದ ಜಿಲ್ಲಾಧ್ಯಕ್ಷರು ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಸದಸ್ಯರು ಆಗಿರುವ ಶ್ರೀಯುತ ಪದ್ಮನಾಭ ಕೊಟ್ಟಾರಿ ಇವರು ದೇಶದ ಲೋಕಸಭೆ ಮತ್ತು ರಾಜ್ಯಸಭೆಯ ಮಂತ್ರಿಗಳ ಸಂಖ್ಯೆ, ಅದರ ಕಾರ್ಯವೈಖರಿಯ ಬಗ್ಗೆ ತಿಳಿಸಿದರು ಹಾಗೂ ಶಾಲಾ ಮಂತ್ರಿಗಳ ಕಾರ್ಯಗಳನ್ನು ವಿವರಿಸುತ್ತಾ ಅವರವರ ಜವಾಬ್ದಾರಿಗಳನ್ನು ರೂಪುರೇಷೆಗೆ ಅನುಗುಣವಾಗಿ ನಿರ್ವಹಿಸಬೇಕು. ಈ ಶಾಲಾಸಂಸತ್ತಿನ ಮೂಲಕ ದೇಶದ ಸಂಸತ್ತಿನ ಬಗ್ಗೆ ತಿಳಿಯುತ್ತಾ ಸಾಗೋಣ ಎಂದು ಶುಭನುಡಿದರು.

ಇನ್ನೋರ್ವ ಅತಿಥಿ ಶ್ರೀರಾಮ ಪ್ರಾಥಮಿಕ ಶಾಲಾ ಅಭಿವೃದ್ಧಿ ಸಮಿತಿಯ ಜೊತೆ ಕಾರ್ಯದರ್ಶಿ ಶ್ರೀಯುತ ನಾಗರಾಜ ಮಾತನಾಡುತ್ತಾ ಇಂದಿನ ಈ ಪ್ರಮಾಣ ವಚನ ಸ್ವೀಕಾರ ಕಾರ್ಯಕ್ರಮವನ್ನು ನೋಡಿದಾಗ ದೇಶದ ಮಂತ್ರಿಗಳ ಪ್ರಮಾಣ ವಚನಾ ಸ್ವೀಕಾರ ಕಾರ್ಯಕ್ರಮವನ್ನು ಮಾಧ್ಯಮದಲ್ಲಿ ನೋಡಿದ ಅನುಭವವಾಯಿತು. ಇಂದು ಪ್ರಮಾಣ ವಚನ ಸ್ವೀಕರಿಸಿದ ಶಾಲಾ ಮಂತ್ರಿಗಳು ತಮ್ಮ ಕಾರ್ಯಗಳನ್ನು ನಿಷ್ಠೆಯಿಂದ ಮಾಡಬೇಕು ಎಂದು ಹಿತನುಡಿದರು.

ಚುನಾವಣೆಯಲ್ಲಿ ವಿಜಯಗಳಿಸಿದ ವಿದ್ಯಾರ್ಥಿಗಳು ವಿವಿಧ ಮಂತ್ರಿಗಳಾಗಿ ಹಾಗೂ ಪರಾಭವಗೊಂಡ ವಿದ್ಯಾರ್ಥಿಗಳು ವಿರೋಧ ಪಕ್ಷದ ಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಕಾರ್ಯಕ್ರಮವನ್ನು ಸಂತೋಷ್ ಶ್ರೀಮಾನ್ ನಿರೂಪಿಸಿದರು. ರೇಷ್ಮಾ ಮಾತಾಜಿ ಸ್ವಾಗತಿಸಿ ಅನ್ನಪೂರ್ಣ ಮಾತಾಜಿ ಧನ್ಯವಾದಗೈದರು.

## ವ್ಯಾಸ ಪೂರ್ಣಿಮೆ 14.07.2014



ವ್ಯಾಸ ಮಹರ್ಷಿಯ ಜನುಮ ದಿನವನ್ನು ದೇಶದಾದ್ಯಂತ ಗುರುಪೂರ್ಣಿಮೆ ದಿನವಾಗಿ ಆಚರಿಸುತ್ತೇವೆ. ಪ್ರಾಥಮಿಕ ವಿಭಾಗದಲ್ಲಿ ಆಯೋಜಿಸಿದ ಈ ಕಾರ್ಯಕ್ರಮದಲ್ಲಿ ಶ್ರೀರಾಮ ಪದವಿಪೂರ್ವ ವಿಭಾಗದ ಉಪಪ್ರಾಂಶುಪಾಲರಾದ ವಸಂತ ಬಲ್ಲಾಳ್ ವ್ಯಾಸ ಪೂರ್ಣಿಮೆಯ ಮಹತ್ವವನ್ನು ತಿಳಿಸಿಕೊಡುತ್ತಾ ಗುರುಗಳು ಬ್ರಹ್ಮ, ವಿಷ್ಣು, ಮಹೇಶ್ವರರಿಗಿಂತಲೂ ಶ್ರೇಷ್ಠವಾದವರು. "ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ" ಎಂಬಂತೆ ನಮ್ಮನ್ನು ನಾವು ಸಂಪೂರ್ಣವಾಗಿ ಗುರುವಿಗೆ ಸಮರ್ಪಿಸಿಕೊಂಡಾಗ ಮಾತ್ರ ನಮಗೆ ಮುಕ್ತಿ ದೊರೆಯುತ್ತದೆ ಅಂದರೆ ನಮ್ಮ ಜೀವನ ಸಾರ್ಥಕವಾಗುತ್ತದೆ. ಗುರು ಇದ್ದಾಗ ಮಾತ್ರ ಒಬ್ಬ ವ್ಯಕ್ತಿ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ. ಗುರುವು ಪ್ರತಿಯೊಬ್ಬರಲ್ಲೂ ಇರುವ ಪ್ರತಿಭೆಗಳನ್ನು ಪ್ರಚೋದಿಸುವ ಕಾರ್ಯವನ್ನು ಮಾಡುತ್ತಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲಾ ಅಭಿವೃದ್ಧಿ ಸಮಿತಿಯ ಸದಸ್ಯ ಶ್ರೀ ಶಿವಗಿರಿ ಸತೀಶ್ ಭಟ್ ಹಾಗೂ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

ಕಾರ್ಯಕ್ರಮವನ್ನು ಕಾವ್ಯಶ್ರೀ ಮಾತಾಜಿ ನಿರೂಪಿಸಿ ಚೈತ್ರ ಮಾತಾಜಿ ಸ್ವಾಗತಿಸಿದರು.

## ಶಾಲಾ ಮಟ್ಟದ ಪ್ರತಿಭಾ ಕಾರಂಜಿ 19.07.2014

ಶಾಲಾ ಮಟ್ಟದ ಪ್ರತಿಭಾ ಕಾರಂಜಿಯು ವೇದವ್ಯಾಸ ಸಭಾಂಗಣದಲ್ಲಿ ಮುಖ್ಯೋಪಾಧ್ಯಾಯರು ಹಾಗೂ ಎಲ್ಲಾ ಮಾತಾಜಿ ಶ್ರೀಮಾನ್‌ಗಳ ಮಾರ್ಗದರ್ಶನದಲ್ಲಿ ನಡೆಸಲಾಯಿತು. ವಿದ್ಯಾರ್ಥಿಗಳು ಬಹಳ ಉತ್ಸಾಹದಿಂದ ವೈಯಕ್ತಿಕ ಹಾಗೂ ಸಾಮೂಹಿಕ ಸ್ಪರ್ಧೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹಿರಿಯ ವಿಭಾಗದ ಹಾಗೂ ಕಿರಿಯ ವಿಭಾಗದ ವೈಯಕ್ತಿಕ ಮತ್ತು ಸಾಮೂಹಿಕ ಸ್ಪರ್ಧೆಗಳನ್ನು ಪ್ರತ್ಯೇಕವಾಗಿ ನಡೆಸಲಾಯಿತು.

## ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ (RTE) ಪರಿಶೀಲನೆ

ಶ್ರೀರಾಮ ಪ್ರಾಥಮಿಕ ವಿಭಾಗಕ್ಕೆ ದಿನಾಂಕ 17.07.2014 ಗುರುವಾರದಂದು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ (RTE) ಇದರ 3 ಅಧಿಕಾರಿಗಳು ಆಗಮಿಸಿದ್ದು ದಾಖಲೆಗಳನ್ನು ಪರಿಶೀಲಿಸಿದರು.

## ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ದ್ವಿತೀಯ 25.07.2014

ಸಾಂದೀಪನಿ ವಿದ್ಯಾಸಂಸ್ಥೆ ನರಿಮೊಗರು ಇಲ್ಲಿ ನಡೆದ ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ ಭಾಗವಹಿಸಿದ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ಶಮಿತಾ, ಪ್ರಿಯಾ ಭಟ್, ಗೌರಿ, ರಕ್ಷಾ.ಪಿ, ಗೌತಮಿ ದ್ವಿತೀಯ ಸ್ಥಾನವನ್ನು ಪಡೆದು–ಕೊಂಡಿದ್ದಾರೆ.

## ಫುಟ್‌ಬಾಲ್ ಪ್ರಥಮ

ಮಂಗಳೂರು ಕೇಂದ್ರ ಮೈದಾನದಲ್ಲಿ 30.07.2014 ಮತ್ತು 31.07.2014 ರಂದು ನಡೆದ ಜಿಲ್ಲಾ ಮಟ್ಟದ ಖಟಿಜಜರಿಜಟಿಜಜಟಿಣ ಅಣಾರಿ ಖಿಂಣಡಿಟಿಚಿಟಜಟಿಣ 2014 ಇದರಲ್ಲಿ ಭಾಗವಹಿಸಿದ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆಯ ಹುಡುಗರ ತಂಡವು ಪ್ರಥಮ ಸ್ಥಾನ ಪಡೆದುಕೊಂಡಿದೆ.

## ಸಂಸ್ಕೃತ ಸಂಘ ಉದ್ಘಾಟನೆ : 05–07–14

ಸಂಸ್ಕೃತ ಭಾರತೀಯ ಭಾಷೆಗಳಿಗೆ ತೃತೀಯ ಸ್ಥಾನದಲ್ಲಿದೆ. ಉತ್ತಮ ಸಂಸ್ಕಾರದಿಂದ ಸಂಸ್ಕೃತಿಯ ಉಳಿವು ಸಾಧ್ಯ ಎಂದು ನಿವೃತ್ತ ಪ್ರಾಂಶುಪಾಲ ಮಹೇಶ್ವರ ಭಟ್ ಬರೆಪ್ಪಾಡಿ ಹೇಳಿದರು. ಸಂಸ್ಕೃತ ಸಂಘ ಉದ್ಘಾಟನೆ ಮತ್ತು ಸಂಸ್ಕೃತ ಪ್ರಥಮ ಭಾಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಿ ಅವರು ಮಾತನಾಡಿದರು.

ಗಾಯತ್ರಿ ಮಂತ್ರ ಮತ್ತು ಸರಸ್ವತೀ ವಂದನೆಯ ಮಹತ್ವವನ್ನು ತಿಳಿಸಿದ ಅವರು ನಿತ್ಯ ಜೀವನದಲ್ಲಿ ಪ್ರಾರ್ಥನೆಯಿಂದ ಕಾರ್ಯಕ್ಕೆ ಸ್ಫೂರ್ತಿಯಾಗುತ್ತದೆ ಎಂದರು. ಶಾಲಾ ಹಿರಿಯ ಶಿಕ್ಷಕ ರಮೇಶ ಎನ್. ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ ಶಿಕ್ಷಕರಾದ ಜಯರಾಮ ವಿ. ಕೃಷ್ಣ ಕಾಟುಕುಕ್ಕೆ, ಗಾಯತ್ರಿ ಕೆದಿಲ, ಗೋಪಾಲ ಅಮ್ಮೂರು ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ತರಗತಿಯಲ್ಲಿ 125 ರಲ್ಲಿ 125 ಅಂಕ ಪಡೆದ ಸತ್ಯಶ್ಯಾಮ, ಸುಮನಾಭಟ್, ನಿರೀಕ್ಷಾ, ಗ್ರಹಿತಾ ಇವರನ್ನು ಶಾಲು ಹೊದಿಸಿ ಪ್ರೋತ್ಸಾಹ ಧನ ನೀಡಿ ಅಭಿನಂದಿಸಲಾಯಿತು.

ಶಾಲಾ ವಿದ್ಯಾರ್ಥಿ ನಾಯಕ ರಘುವೀರ ಹೆಗ್ಡೆ ಸ್ವಾಗತಿಸಿ, ದಿಶಾ ನಿರೂಪಿಸಿ, ಯಜ್ಞೇಶ ವಂದಿಸಿದರು. ಮೈತ್ರೇಯಿ, ಧನ್ಯಶ್ರೀ, ಚೈತ್ರಾ, ಅನ್ನಪೂರ್ಣ ಸಂಸ್ಕೃತ ಗೀತೆಗಳನ್ನು ಹಾಡಿದರು.

## ಪೂರ್ವಭಾವಿ ಸಭೆ : 22.07.2014



ಶ್ರೀರಾಮ ಪ್ರೌಢಶಾಲೆಯಲ್ಲಿ ಕಲ್ಲಡ್ಕ ವಲಯ ಕ್ರೀಡಾಕೂಟ ಸಮಿತಿಯ ಸಭೆಯು ಗೌರವಾಧ್ಯಕ್ಷ ಶ್ರೀ ವಸಂತಮಾಧವರ ಅಧ್ಯಕ್ಷತೆಯಲ್ಲಿ ಜರಗಿ–ತು. ಸಮಿತಿಯ ಅಧ್ಯಕ್ಷ ಶ್ರೀ ಗಂಗಾಧರ ರೈ ಮಾಣಿ, ತಾಲೂಕು ಕೋಶಾಧಿಕಾರಿ ಶ್ರೀ ಜಗದೀಶ, ಉಪಾಧ್ಯಕ್ಷ ಶ್ರೀ ಪ್ರಭಾಕರ ಶೆಟ್ಟಿ, ತಾಲೂಕು ಅಧ್ಯಕ್ಷ ಶ್ರೀ ರಾಧಾಕೃಷ್ಣ ಅಡ್ಯಂತಾಯ ಉಪಸ್ಥಿತರಿದ್ದರು. ತಾಲೂಕು ಪರಿವೀಕ್ಷಣಾಧಿಕಾರಿ ಶ್ರೀ ಗುರುನಾಥ್ ಭೀ ಬಾಗೇವಾಡಿ ಮಾರ್ಗದರ್ಶನ ಮಾಡಿದರು. ವಲಯದ ವಿವಿಧ ಕ್ಲಸ್ಟರ್‌ಗಳ ಸಿ.ಆರ್.ಪಿ.ಗಳು ಉಪಸ್ಥಿತರಿದ್ದ ಸಭೆಯಲ್ಲಿ ಮೇಲಾಟದ ಸ್ಥಳ ಹಾಗೂ ದಿನಾಂಕಗಳನ್ನು ನಿಗದಿಪಡಿಸಲಾಯಿತು. ವಲಯ ಕಾರ್ಯದರ್ಶಿ ಸ್ವಾಗತಿಸಿ ಸಿ.ಆರ್.ಪಿ. ಉದಯಕುಮಾರ್ ವಂದಿಸಿದರು.

## ಸಮಾಜವಿಜ್ಞಾನ ಶಿಕ್ಷಕರ ಕಾರ್ಯಾಗಾರ : 07–07–14



ಹೊಸ ಪಠ್ಯಪುಸ್ತಕ ಬೋಧನೆಗೆ ಅನುಕೂಲವಾಗುವಂತೆ ಬೋಧನಾ ಕ್ರಮದಲ್ಲಿ ಹೊಸ ತಂತ್ರಜ್ಞಾನವನ್ನು ಬಳಸಿಕೊಳ್ಳಬೇಕು. ಅಮೂರ್ತವಾದ ಕಲಿಕೆಯ ಬದಲು ಮೂರ್ತ ಸ್ವರೂಪದ ಶಿಕ್ಷಣದ ಕಲಿಕೆ ಆದ್ಯತೆ ನೀಡಬೇಕು. ಮುಂದಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಉತ್ತಮ ಫಲಿತಾಂಶವನ್ನು ಪಡೆಯಲು ಶಿಕ್ಷಕರ ಪ್ರಯತ್ನ ಅಗತ್ಯ ಎಂದು ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಕಾರಿಂಜ ಹೇಳಿದರು.

ಅವರು ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಸೋಮವಾರ ಬಂಟ್ವಾಳ ತಾಲೂಕಿನ ಸಮಾಜವಿಜ್ಞಾನ ಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ತರಗತಿಯಲ್ಲಿ ಶಿಕ್ಷಕರು ಪರಿಣಾಮಕಾರಿಯಾಗಿ ಅಳವಡಿಕೊಳ್ಳಬೇಕು. ಪರಸ್ಪರ ಸಂವಾದ ಹಾಗೂ ಹೊಸತಂತ್ರಗಳ ಮೂಲಕ ವಿದ್ಯಾರ್ಥಿಗಳಲ್ಲಿ ಕಲಿಕಾ ಕೌಶಲಗಳನ್ನು ಬೆಳೆಸಬೇಕೆಂದು ತಿಳಿಸಿದರು.

ಶ್ರೀರಾಮ ಪ್ರೌಢಶಾಲೆಯ ಮುಖ್ಯಶಿಕ್ಷಕ ವಸಂತಮಾಧವ ಅಧ್ಯಕ್ಷತೆ ವಹಿಸಿ ಶುಭಹಾರೈಸಿದರು. ವೇದಿಕೆಯಲ್ಲಿ ಶಿಕ್ಷಣ ಸಂಯೋಜಕರಾದ ರಮಾನಂದ, ಶ್ರೀಮತಿ ಸುಜಾತ, ಸಂಪನ್ಮೂಲ ವ್ಯಕ್ತಿಗಳಾದ ನಾರಾಯಣ ಉಪಾಧ್ಯಾಯ ಅಡ್ಯನಡ್ಕ, ಗಂಗಾಧರ, ಮಹೇಶ ಕೊಯಿಲ, ಪ್ರವೀಣ ಸೂರ್ಯ, ರಮೇಶ ಬಿ.ಕೆ ವಿಟ್ಲ ಉಪಸ್ಥಿತರಿದ್ದರು.

## ಕನ್ನಡ ಭಾಷಾ ಶಿಕ್ಷಕರ ಕಾರ್ಯಾಗಾರ 11–07–14



ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳ ಬಗ್ಗೆ ಶಿಕ್ಷಕರು ಹೆಚ್ಚಿನ ಗಮನ ನೀಡಬೇಕು. ವಿಶೇಷ ತರಗತಿಯನ್ನು ತೆಗೆದುಕೊಳ್ಳುವ ಮೂಲಕ ಪರಿಹಾರಬೋಧನೆಯ ಅಗತ್ಯವಿದೆ. ನಿಧಾನ ಕಲಿಕೆಯ ವಿದ್ಯಾರ್ಥಿಗಳನ್ನು ಮುಖ್ಯ ವಾಹಿನಿಗೆ ತರುವಲ್ಲಿ ಶಿಕ್ಷಕರ ಜವಾಬ್ದಾರಿ ಹೆಚ್ಚಿದೆ ಎಂದು ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಕಾರಿಂಜ ಹೇಳಿದರು.

ಅವರು ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಬಂಟ್ವಾಳ ತಾಲೂಕು ಮಟ್ಟದ ಕನ್ನಡ ಭಾಷಾ ಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದರು.

ನೂತನ ಪಠ್ಯಪುಸ್ತಕವು ಮಕ್ಕಳ ಸಮಗ್ರ ವ್ಯಕ್ತಿತ್ವವನ್ನು ನಿರ್ಮಿಸಲು ಪೂರಕವಾಗಿದೆ. ಪರಿಣಾಮಕಾರಿ ಬೋಧನೆಯ ಮೂಲಕ ವಿದ್ಯಾರ್ಥಿಗಳನ್ನು ನಿರಂತರ ಹಾಗೂ ಸಮಗ್ರ ಮೌಲ್ಯಮಾಪನಕ್ಕೆ ಸಿದ್ಧಗೊಳಿಸಬೇಕು. ಸಾಮಾನ್ಯ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಸೂಕ್ತ ತರಬೇತಿ ನೀಡುವ ಅಗತ್ಯವಿದೆ ಎಂದು ತಿಳಿಸಿದರು. ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ವಸಂತಮಾಧವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮಾತೃಭಾಷೆಯಾಗಿ ಆಡಳಿತ ಭಾಷೆಯಾಗಿ ಉಳಿಯಬೇಕಾದರೆ ಶಾಲೆಗಳಲ್ಲಿ ಕನ್ನಡ ಭಾಷಾ ಕಲಿಕೆಗೆ ಹೆಚ್ಚಿನ ಒತ್ತು ನೀಡಬೇಕು. ಭಾಷೆ ವ್ಯಾವಹಾರಿಕ ಮತ್ತು ಸಂಸ್ಕೃತಿಯ ವಾಹಕವಾಗಿದ್ದು ನಾಡಿನ ಅಭಿವೃದ್ಧಿಗೆ ಪೂರಕವಾಗಿದೆ. ಭಾಷೆ ಕಲಿಸುವ ಮೂಲಕ ವಿಷಯ ಕಲಿಕೆಗೆ ಸಹಕಾರಿಯಾಗಬೇಕು ಎಂದರು.

ಶಿಕ್ಷಣ ಸಂಯೋಜಕರಾದ ಶ್ರೀ ರಮಾನಂದ, ಸಂಪನ್ಮೂಲ ವ್ಯಕ್ತಿಗಳಾದ ಬಂಟ್ವಾಳ ತಾಲೂಕು ಕ.ಸಾ.ಪ. ಅಧ್ಯಕ್ಷ ಜಯಾನಂದ ಪೆರಾಜೆ, ಸರಕಾರಿ ಪ್ರೌಢಶಾಲೆ ಪಂಜಿಕಲ್ಲಿನ ರಮೇಶ್, ಮಾಣಿಲ ಪ್ರೌಢಶಾಲೆಯ ಡಾಕೇಶ್ವರ ಉಪಸ್ಥಿತರಿದ್ದರು. ಶಿಕ್ಷಕರಾದ ಗೋಪಾಲ್ ಸ್ವಾಗತಿಸಿ, ಮನೋಜ್ ಕುಮಾರ್ ವಂದಿಸಿದರು.

## ದೈಹಿಕ ಶಿಕ್ಷಕರ ಕಾರ್ಯಾಗಾರ 16–07–14

ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ಸಂಘಟಿಸಲಾದ ಬಂಟ್ವಾಳ ತಾಲೂಕು ದೈಹಿಕ ಶಿಕ್ಷಣ ಶಿಕ್ಷಕರ ಕಾರ್ಯಾಗಾರವನ್ನು ಉದ್ಘಾಟಿಸಿ ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿ ಶೇಷಶಯನ ಕಾರಿಂಜ "ಶೈಕ್ಷಣಿಕ ವರ್ಷದ ತಾಲೂಕು ಮತ್ತು ವಲಯದ ಕ್ರೀಡಾಕೂಟವನ್ನು ವಲಯ ಶಿಕ್ಷಕರು ವ್ಯವಸ್ಥಿತವಾಗಿ ಸಂಘಟಿಸಿ ಶಿಷ್ಟಾಚಾರವನ್ನು ಪಾಲಿಸಬೇಕು. ಹೆಚ್ಚಿನ ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ಸ್ಪರ್ಧೆಗಳಿಗೆ ಸಿದ್ಧಗೊಳಿಸಬೇಕು.



ಕ್ರೀಡಾಕೂಟದಲ್ಲಿ ಸಮಯಪಾಲನೆ ಮತ್ತು ಶಿಸ್ತು ಅಗತ್ಯ” ಎಂದು ಹೇಳಿದರು.

ಮುಖ್ಯೋಪಾಧ್ಯಾಯ ವಸಂತಮಾಧವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ, ವಿದ್ಯಾರ್ಥಿಗಳಿಗೆ ಕ್ರೀಡಾ ಚಟುವಟಿಕೆಯ ಮೂಲಕ ನೀಡುವ ಶಿಕ್ಷಣ ಜೀವನ ಪರ್ಯಂತ ಉಳಿಯುತ್ತದೆ. ಆತ್ಮ ವಿಶ್ವಾಸವನ್ನು ಬೆಳೆಸುತ್ತದೆ. ಆರೋಗ್ಯದಿಂದಿರಲು ಅನುಕೂಲವಾಗುತ್ತದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ 32 ವರ್ಷ ಶಾರೀರಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ಸತ್ಯಶಂಕರ ರೈ ಇವರನ್ನು ಸನ್ಮಾನಿಸಲಾಯಿತು. ಸುರೇಶ್‌ಶೆಟ್ಟಿ ಕೇಪು ಅಭಿನಂದಿಸಿದರು. ವೇದಿಕೆಯಲ್ಲಿ ತಾಲೂಕು ಶಿಕ್ಷಣ ಪರಿವೀಕ್ಷಣಾಧಿಕಾರಿ ಗುರುನಾಥ ಬಾಗೇವಾಡಿ ಪ್ರಸ್ತಾವನೆಗೈದರು. ಶಿಕ್ಷಣ ಸಮನ್ವಯ ಅಧಿಕಾರಿ ಕಮಲಾಕ್ಷ, ಶಿಕ್ಷಣ ಸಂಯೋಜಕರಾದ ಸುಜಾತ, ರಮಾನಂದ, ದಿನೇಶ, ಹಾಗೂ ಶಾರೀರಿಕ ಶಿಕ್ಷಕರ ಸಂಘದ ಪದಾಧಿಕಾರಿಗಳಾದ ಗೌರವಾಧ್ಯಕ್ಷ ಅಖಿಲ್ ಶೆಟ್ಟಿ ನಂದಾವರ, ಉಮಾನಾಥ ರೈ, ನವೀನ್, ಸಹಶಿಕ್ಷಕರ ಸಂಘದ ಅಧ್ಯಕ್ಷ ತಾರೇಶ್ ನಾಯ್ಕ್, ಅಧ್ಯಾಪಕರ ಸಹಕಾರಿ ಸಂಘದ ಅಧ್ಯಕ್ಷ ರಮೇಶ್‌ನಾಯಕ್ ಮೊದಲಾದವರು ಉಪಸ್ಥಿತರಿದ್ದರು.

ತಾಲೂಕು ಅಧ್ಯಕ್ಷ ರಾಧಾಕೃಷ್ಣ ಅಡ್ಯಂತಾಯ ಸ್ವಾಗತಿಸಿ ಕೋಶಾಧಿಕಾರಿ ಜಗದೀಶ ಬಾಳ್ತಿಲ ನಿರೂಪಿಸಿದರು. ಕಾರ್ಯದರ್ಶಿ ರಾಜೇಂದ್ರ ರೈ ವಂದಿಸಿದರು.

## ಸಾಮೂಹಿಕ ಹುಟ್ಟುಹಬ್ಬ ಹಾಗೂ ಭಜನಾ ಕಾರ್ಯಕ್ರಮ : 26.07.2014

ಸಾಮೂಹಿಕ ಹುಟ್ಟುಹಬ್ಬ ಹಾಗೂ ಭಜನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಮೈತ್ರೇಯಿ ಗುರುಕುಲ ಮೂರ್ಕಾಜೆ ಇಲ್ಲಿನ ಅಧ್ಯಾಪಕ ಶ್ರೀ ಕೇಶವಭಟ್ ಮಾತನಾಡಿ ಮಾನವನ ಸೃಷ್ಟಿಯಿಂದ ಭಗವಂತ ಸಂತೋಷಿತನಾದ. ಶ್ರದ್ಧಾ, ಮೇಧಾ, ಪ್ರಜ್ಞಾ,ಎಂಬ ಮೂರು ಶಕ್ತಿಗಳು ಮಾನವನಲ್ಲಿದ್ದು ಆ ಶಕ್ತಿಗಳು ಜಾಗೃತವಾದಾಗ ಮಾನವ ದೇವನಾಗುತ್ತಾನೆ. ಮಾನವ ಜೀವನ ಸಾರ್ಥಕವಾಗಬೇಕಾದರೆ ಆತನಲ್ಲಿ ಸಂಸ್ಕಾರ ಬೆಳೆಸಿಕೊಳ್ಳುವುದು ಅವಶ್ಯಕ. ಇಂತಹ ಹುಟ್ಟುಹಬ್ಬ ಕಾರ್ಯಕ್ರಮಗಳು ಮಕ್ಕಳಿಗೆ ಸಂಸ್ಕಾರ ಬೆಳೆಸಲು ಸ್ಫೂರ್ತಿದಾಯಕ ಎಂದು ತಿಳಿಸಿದರು.

ವೇದಿಕೆಯಲ್ಲಿ ಅತಿಥಿಗಳಾಗಿ ಶಾಲಾ ಹಿರಿಯ ಅಧ್ಯಾಪಕ ಶ್ರೀ ರಮೇಶ್ ಶ್ರೀಮಾನ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ರಂಜನ್(8 ಪ್ರಹ್ಲಾದ) ಸ್ವಾಗತಿಸಿ, ರಾಮನಾರಾಯಣ(10 ಆಜಾದ್) ನಿರೂಪಿಸಿ, ಪ್ರತೀಕ್ಷಾ ರೈ(9 ಚೆನ್ನಮ್ಮ) ವಂದಿಸಿದರು.

## ಗುರು ವಂದನೆ : 14.7.2014



# ಪದವಿಪೂರ್ವ

## ಪ್ರತಿಭಾನ್ವೇಷಣೆ : 2.7.2014

ಪ್ರತಿಭಾರಾಮ ಸಾಹಿತ್ಯ ಮತ್ತು ಭಾವನಾ ಸಾಂಸ್ಕೃತಿಕ ಸಂಘಗಳ ವತಿಯಿಂದ ವಿದ್ಯಾರ್ಥಿಗಳಿಗೆ ಪ್ರತಿಭೆ ಅನಾವರಣ ಮಾಡಲು ಅವಕಾಶ ಮಾಡಿಕೊಡಲಾಯಿತು. ಪ್ರತಿಭಾರಾಮ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ಚಿತ್ರಕಲೆ ಮತ್ತು ಕವನ ಬರೆಯಲು ಅವಕಾಶ ಮಾಡಿಕೊಡಲಾಯಿತು. ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ವಿದ್ಯಾರ್ಥಿಗಳಿಗೆ ತಮ್ಮ ವಿವಿಧ ಪ್ರತಿಭೆಯನ್ನು ಅನಾವರಣ ಮಾಡಲು ಅವಕಾಶ ಮಾಡಿಕೊಡಲಾಯಿತು. ವಿದ್ಯಾರ್ಥಿಗಳು ಹಾಡು, ನೃತ್ಯ, ಜಾದೂ ಪ್ರದರ್ಶನಗಳ ಮೂಲಕ ಪ್ರತಿಭೆಯನ್ನು ವ್ಯಕ್ತಪಡಿಸಿದರು.

## ವಿದ್ಯಾರ್ಥಿ ದಿನ ಆಚರಣೆ ಅ.ಭಾ.ವಿ.ಪರಿಷತ್ ಉದ್ಘಾಟನೆ :09.07.2014



ಅ.ಭಾ.ವಿ.ಪರಿಷತ್ ಕಲ್ಲಡ್ಕ ಘಟಕದ ಉದ್ಘಾಟನೆ ಅಜಿತ ಕುಮಾರ್ ಸಭಾಂಗಣದಲ್ಲಿ ನಡೆಯಿತು. ಮತ್ತು ಆ ದಿನವನ್ನು ವಿದ್ಯಾರ್ಥಿ ದಿನವನ್ನಾಗಿ ಆಚರಿಸಲಾಯಿತು. ಅ.ಭಾ.ವಿ.ಪರಿಷತ್ ಕುರಿತಾಗಿ ಕಾಲೇಜಿನ ಇಂಗ್ಲೀಷ್ ಉಪನ್ಯಾಸಕಿ, ಅ.ಭಾ.ವಿ.ಪರಿಷತ್‌ನ ರಾಜ್ಯ ಕಾರ್ಯಕಾರಿಣಿಯ ಸದಸ್ಯೆ ಅಕ್ಷತಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ವಿದ್ಯಾರ್ಥಿಗಳಲ್ಲಿ ನಾಯಕತ್ವ ಶಿಸ್ತು ಮತ್ತು ಸರ್ವಾಂಗೀಣ ಬೆಳವಣಿಗೆಗಾಗಿ ಸಂಘಟನೆಗಳು ಅಗತ್ಯವೆಂದರು. ವೇದಿಕೆಯಲ್ಲಿ ಉಪಪ್ರಾಚಾರ್ಯ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

## ರಕ್ತ ಗುಂಪು ವರ್ಗೀಕರಣ ಕಾರ್ಯಕ್ರಮ : 17.06.2014

ಕಾಲೇಜಿನ ಅಜಿತ ಕುಮಾರ್ ಸಭಾಂಗಣದಲ್ಲಿ ಭಾಸ್ಕರಾಚಾರ್ಯ ವಿಜ್ಞಾನ ಸಂಘದ ವತಿಯಿಂದ ಪದವಿ ಪೂರ್ವ ಮತ್ತು ಪದವಿ ವಿದ್ಯಾರ್ಥಿಗಳಿಗೆ ರಕ್ತದ ಗುಂಪು ವರ್ಗೀಕರಣ ಮಾಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಪದವಿ ಪೂರ್ವ ವಿಭಾಗದ 107 ವಿದ್ಯಾರ್ಥಿಗಳು ಮತ್ತು ಪದವಿಯ 93 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ತಮ್ಮ ರಕ್ತದ ಗುಂಪು ವರ್ಗೀಕರಣ ಮಾಡಿಸಿಕೊಂಡರು. ವಿಜ್ಞಾನ ಸಂಘದ ನಿರ್ದೇಶಕರಾದ ಸೂರ್ಯನಾರಾಯಣ ಭಟ್ ಮತ್ತು ಸಹ ನಿರ್ದೇಶಕರಾದ ಜಯಲಕ್ಷ್ಮೀಯವರ ನಿರ್ದೇಶನದಲ್ಲಿ ವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ರಕ್ತದ ಗುಂಪು ವರ್ಗೀಕರಣ ನಡೆಸಿದರು.

## ಖೋ-ಖೋ ಮತ್ತು ಕಬಡ್ಡಿ ಪ್ರಾಂತೀಯ ಮಟ್ಟಕ್ಕೆ ಆಯ್ಕೆ ದಿನಾಂಕ-21.06.2014

ಸುಳ್ಯ ತಾಲೂಕಿನ ಎಲಿಮಲೆಯ ಜ್ಞಾನದೀಪ ಪ್ರೌಢಶಾಲೆಯಲ್ಲಿ ಜರುಗಿದ ವಿದ್ಯಾಭಾರತಿ ಜಿಲ್ಲಾಮಟ್ಟದ ಕಬಡ್ಡಿ ಪಂದ್ಯಾಟದಲ್ಲಿ ಕಲ್ಲಡ್ಕ ಶ್ರೀರಾಮ ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಅದೇ ರೀತಿ ಕೈರಂಗಳದ ವಿದ್ಯಾಗಣಪತಿ ಪದವಿಪೂರ್ವ ಕಾಲೇಜು ಪುಣ್ಯಕೋಟಿ ನಗರದಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಖೋ ಖೋ ಪಂದ್ಯಾಟದಲ್ಲಿ ನಮ್ಮ ವಿದ್ಯಾರ್ಥಿಗಳು ಪ್ರಥಮ ಸ್ಥಾನವನ್ನು ಗಳಿಸಿದ್ದಾರೆ. ಇವರು ಜುಲೈ-27, 29ರ ತನಕ ವಿದ್ಯಾಭಾರತಿ ಪ್ರಾಂತೀಯ ಮಟ್ಟದಲ್ಲಿ ಬೀದರ್‌ನಲ್ಲಿ ನಡೆಯುವ ಕಬಡ್ಡಿ ಮತ್ತು ಖೋ ಖೋ ಪಂದ್ಯಾಟದಲ್ಲಿ ಭಾಗವಹಿಸಲಿದ್ದಾರೆ.

## ಸಾಂಸ್ಕೃತಿಕ ಕಾರ್ಯಕ್ರಮಗಳು :

ಪದವಿ ಪೂರ್ವ ವಿಭಾಗದ ವಿದ್ಯಾರ್ಥಿಗಳ ಪ್ರತಿಭೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಭಾವನಾ ಸಂಸ್ಕೃತಿಕ ಸಂಘವು ಅವಕಾಶ ಮಾಡಿಕೊಡುತ್ತಿದ್ದು, ಅದರಂತೆ ದ್ವಿತೀಯ ಕಲಾ ವಿಭಾಗದ ವಿದ್ಯಾಥಿಗಳು ದಿನಾಂಕ 16-06-14ರಂದು ತುಳುನಾಡಿನ ವಿವಿಧ ವಿಚಾರಗಳ ಕುರಿತಾಗಿ ಕಾರ್ಯಕ್ರಮ



ನಡೆಸಿಕೊಟ್ಟರು. ತರಗತಿಯ ಎಲ್ಲಾ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರರಾದರು. ಅವರು ಅದರಲ್ಲೂ ಮುಖ್ಯವಾಗಿ ನವಶಕ್ತಿ ವೈಭವದ ಕುರಿತಾಗಿ ಮಾಡಿದ ನೃತ್ಯ



ಅದ್ಭುತವಾಗಿತ್ತು. ತುಳುನಾಡಿನ ಭೂತಾರಾಧನೆಯ ಕುರಿತಾಗಿ ಸ್ಪಷ್ಟವಾದ ಕಲ್ಪನೆ ಮೂಡುವಂತೆಯೇ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಕಂಬಳ, ಜನಪದ ಹಾಡು ನೃತ್ಯಗಳು ತುಂಬಾ ಅಚ್ಚುಕಟ್ಟಾಗಿ ಮೂಡಿಬಂದವು.

ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ದಿನಾಂಕ–23.07.2014 ರಂದು ವೈವಿಧ್ಯಮಯ ನೃತ್ಯ ಮತ್ತು ಯುವಜನತೆಗೆ ಉತ್ತೇಜನ ನೀಡುವಂತಹ ಮನೋರಂಜನಾ ಕಾರ್ಯಕ್ರಮಗಳನ್ನು ನೀಡಿದರು. ಚಂದ್ರಶೇಖರ್ ಆಜಾದ್ ಮತ್ತು ಬಾಲಗಂಗಾಧರ ತಿಲಕ್‌ರವರ ಜನ್ಮದಿನವಾದ ಅಂದು ಆ ಕಲ್ಪನೆ ಇಟ್ಟುಕೊಂಡೆ ಕಾರ್ಯಕ್ರಮವನ್ನು ಆ ಮಹಾನ್ ಚೇತನಗಳಿಗೆ ಸಮರ್ಪಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

## ಸಂಸ್ಕೃತ ಅಧ್ಯಯನ ಕಾರ್ಯಗಾರ : 29.06.2014

ಶ್ರೀರಾಮ ಪದವಿ ಪೂರ್ವ ಕಾಲೇಜಿನಲ್ಲಿ ಸಂಸ್ಕೃತ ಸಂಘ ಮತ್ತು ಸಂಸ್ಕೃತಿ ಭಾರತೀ ಸಹಯೋಗದೊಂದಿಗೆ ಕಾಲೇಜಿನ ಪದವಿ ಪೂರ್ವ ವಿದ್ಯಾರ್ಥಿಗಳಿಗಾಗಿ ಒಂದು ದಿನದ ಭಾಷಾ ಬೋಧನದ ತರಬೇತಿ ನಡೆಯಿತು.

ಕಾರ್ಯಕ್ರಮವನ್ನು ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಚಾರ್ಯ ಶ್ರೀ ಮಹೇಶ್ವರ ಭಟ್ ಉದ್ಘಾಟಿಸಿ, ಸಂಸ್ಕೃತದ ಅಧ್ಯಯನಕ್ಕಾಗಿ ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.

ಕಾರ್ಯಾಗಾರದಲ್ಲಿ ಸಂಸ್ಕೃತಿ ಭಾರತೀ ಮಂಗಳೂರು ವಿಭಾಗ ಶಿಕ್ಷಣದ ಪ್ರಮುಖ್ ಬಾಳಿಲ ಪ್ರೌಢಶಾಲೆಯ ಸಂಸ್ಕೃತ ಶಿಕ್ಷಕ ವೆಂಕಟೇಶ ಭಟ್, ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಸಂಸ್ಕೃತ ಉಪನ್ಯಾಸಕ ಶಿವಭಟ್, ಧರ್ಮತ್ತಡ್ಕ ವಿದ್ಯಾಲಯದ ಸಂಸ್ಕೃತ ಶಿಕ್ಷಕ ಕೃಷ್ಣಪ್ರಸಾದ್, ಮೈತ್ರೇಯಿ ಗುರುಕುಲದ ಶಿಕ್ಷಕಿಯರಾದ ಶ್ರುತಿ, ಜ್ಯೋತಿ, ಶ್ರೀದೇವಿ, ಅನನ್ಯಲಕ್ಷ್ಮೀ ಕಾಲೇಜಿನ 115 ವಿದ್ಯಾರ್ಥಿಗಳಿಗೆ ಮಾರ್ಗದರ್ಶನವನ್ನಿತ್ತರು.

ಕಾರ್ಯಕ್ರಮದಲ್ಲಿ ಸಂಸ್ಕೃತ ಭಾರತೀ ಪುತ್ತೂರಿನ ಜಿಲ್ಲಾ ಸಂಯೋಜಕ ಶ್ರೀರಾಮ ಪ್ರೌಢಶಾಲೆಯ ಸಂಸ್ಕೃತ ಅಧ್ಯಾಪಕ ಜಯರಾಮ ಭಟ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಕಾಲೇಜಿನ ಸಂಸ್ಕೃತ ಉಪನ್ಯಾಸಕಿ ಶಶಿಕಲ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ವಿದ್ಯಾರ್ಥಿ ಅಂಕಣ

## ಗಣಿತ ಬಂಧ

| | | | | |
|---|---|---|---|---|
| | 1 | | | |
| 2 | | | | |
| | | | | 4 |
| | | | | |
| 3 | | | | |

**ಎಡದಿಂದ ಬಲಕ್ಕೆ**

2. ಸಮತಲಾಕೃತಿಯ ಒಟ್ಟು ಬಾಹುಗಳ ಮೊತ್ತ–4
3. ವೃತ್ತಕೇಂದ್ರದಲ್ಲಿನ ಕೋನವು 1250, ಅಂತಃಸ್ಥ ಕೋನದ ಎರಡಷ್ಟಿರುತ್ತದೆ. – 5

**ಮೇಲಿನಿಂದ ಕೆಳಕ್ಕೆ**

1. ವೃತ್ತದ ಸುತ್ತಳತೆ – 5
4. ಮೂರು ಕೋನಗಳ ರೇಖಾಚಿತ್ರ – 3

## ಚಿತ್ರ ನೋಡಿ ಶೀರ್ಷಿಕೆ ಬರೆಯಿರಿ



ಮೇಲಿನ ಚಿತ್ರಕ್ಕೆ ಸರಿಹೊಂದುವ ಶೀರ್ಷಿಕೆಯನ್ನು ಬರೆದು ನಿಮ್ಮ ವಿಭಾಗದ ಸರಯೂ ಪೆಟ್ಟಿಗೆಗೆ ಹಾಕಿರಿ. ಉತ್ತಮವಾದ ಬರಹಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

## ಶಿಕ್ಷಕರ ಸೆಮಿನಾರ್

**ದಿನಾಂಕ:28.06.2014 ಬಿ.ಬಿ.ಎಂ :** ಭುವನೇಂದ್ರ ಕಾಲೇಜು ಕಾರ್ಕಳದಲ್ಲಿ ನಡೆದ ವಾಣಿಜ್ಯ ವಿಭಾಗದ ಬಿ.ಬಿ.ಎಂ ತರಗತಿಯ ಒಂದು ದಿನದ ಕಾರ್ಯಗಾರದಲ್ಲಿ ವಾಣಿಜ್ಯ ವಿಭಾಗದ ಉಪನ್ಯಾಸಕಿ ಅಕ್ಷತಾ ಬಿ.,ಶ್ರೀಮತಿ ಶೈಲಜಾ ಜಿ, ಕು. ಶೈಲಜಾ, ಜಯಲಕ್ಷ್ಮಿ ಹಾಗೂ ಉಪನ್ಯಾಸಕ ರಂಜಿತ್ ಭಾಗವಹಿಸಿದರು.

**ದಿನಾಂಕ; 05.07.2014 ಬಿ.ಕಾಂ :** ಅಲೋಶಿಯಸ್ ಕಾಲೇಜು ಮಂಗಳೂರಿನಲ್ಲಿ ನಡೆದ ವಾಣಿಜ್ಯ ವಿಭಾಗದ ಬಿ.ಕಾಂ ತರಗತಿಯ ಒಂದು ದಿನದ ಕಾರ್ಯಗಾರದಲ್ಲಿ ವಾಣಿಜ್ಯ ವಿಭಾಗದ ಉಪನ್ಯಾಸಕಿ ಅಕ್ಷತಾ ಬಿ., ಶ್ರೀಮತಿ ಸುಕನ್ಯಾ ಹಾಗೂ ಉಪನ್ಯಾಸಕ ರಂಜಿತ್ ಭಾಗವಹಿಸಿದರು.

**ದಿನಾಂಕ 10.07.2014 ಕನ್ನಡ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆದ ಕನ್ನಡ ವಿಭಾಗದ ಹೊಸ ಪಠ್ಯಪುಸ್ತಕ ಯೋಜನೆಯ ಒಂದು ದಿನದ ಕಾರ್ಯಗಾರದಲ್ಲಿ ಕನ್ನಡ ಉಪನ್ಯಾಸಕ ಯತಿರಾಜ್ ಹಾಗೂ ಮಹೇಶ್ ನೆಟ್ಲ ಭಾಗವಹಿಸಿದರು.

**ದಿನಾಂಕ; 16.07.2014 ಇಂಗ್ಲೀಷ್ :** ಕೆನರಾ ಕಾಲೇಜು ಮಂಗಳೂರಿನಲ್ಲಿ ನಡೆದ ಇಂಗ್ಲೀಷ್ ವಿಭಾಗದ ಒಂದು ದಿನದ ಕಾರ್ಯಗಾರದಲಿ ಇಂಗ್ಲೀಷ್ ಉಪನ್ಯಾಸಕಿ ಕು. ಜ್ಯೋತಿ ಇವರು ಭಾಗವಹಿಸಿರುತ್ತಾರೆ.

## ಸಾಂಸ್ಕೃತಿಕ ಕಾರ್ಯಕ್ರಮ



### ದಿನಾಂಕ: 11.07.2014

ಕಾಲೇಜಿನ ಅಜಿತಕುಮಾರ ಸಭಾಭವನದಲ್ಲಿ ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ತೃತೀಯ ವಿಭಾಗದ ವಿದ್ಯಾರ್ಥಿಗಳಿಂದ ಗ್ರಾಮೀಣ ತೊಗಡು ಎಂಬ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ವೇದಿಕೆಯನ್ನು ಗ್ರಾಮೀಣ ಕಲ್ಪನೆಗೆ ಮೀಸಲಾಗುವಂತೆ ಗರಡಿ ಮನೆ ಎಂಬ ಚೌಕಟ್ಟಿನಲ್ಲಿ ರಚಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಮಾಜಿ ಶಾಸಕ ಹಾಗೂ ಶಾಲಾ ಆಡಳಿತ ಮಂಡಳಿ ಸದಸ್ಯರಾದ ಶ್ರೀ.ಕೆ.ಪದ್ಮನಾಭ ಕೊಟ್ಟಾರಿಯವರು ನೇಜಿ ನೆಡುವ ಮೂಲಕ ಉದ್ಘಾಟಿಸಿದರು. ಕಾಲೇಜಿನ ಪ್ರಾಂಶುಪಾಲರು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳು ಅಳಿದು ಹೋಗುತ್ತಿರುವ ಕೆಲ ಗ್ರಾಮೀಣ ಆಚರಣೆಗಳನ್ನು ಮೆಲುಕು ಹಾಕಿ ಎಲ್ಲರಿಗೂ ತಿಳಿಯುವಂತೆ ಮಾಡಿದರು.ವಿದೇಶಿ ಹುಡುಗನು ಗ್ರಾಮೀಣ ಸಂಸ್ಕೃತಿಗೆ ಮಾರುಹೋಗಿ ಗ್ರಾಮವನ್ನು ಇಷ್ಟ ಪಡುವಂತಹ ವಿಷಯವನ್ನು ಕಂಬಳ,ಉಳಿಗಾರ,ಪಂಚಾಯಿತಿ ಕಟ್ಟೆ, ಮಾರುತಿ, ಹಾವಾಡಿಗ, ಕೃಷಿ, ಜಾತ್ರೆ, ಗ್ರಾಮಕ್ಕೆ ಡಂಗುರ, ನಾಟಕಗಳು,ನೃತ್ಯಗಳು, ಬಾಗೀನ ನೀಡುವುದು. ಹೀಗೆ ಹಲವು ವೈವಿಧ್ಯಮಯ ಪ್ರದರ್ಶನಗಳನ್ನು ನೀಡಿದರು.

ಕಾರ್ಯಕ್ರಮವನ್ನು ಶ್ರೀಮತಿ ಶೈಲಜಾ ನಿರ್ವಹಿಸಿದರು. ಸಾಂಸ್ಕೃತಿಕ ಸಂಘದ ಸಂಯೋಜ–ಕರು, ನಿರ್ದೇಶಕರು ಹಾಗೂ ಎಲ್ಲಾ ವಿದ್ಯಾರ್ಥಿಗಳು, ಉಪನ್ಯಾಸಕ ವರ್ಗ, ಬೋಧಕ–ಬೋಧಕೇತರ ಸಿಬ್ಬಂದಿಗಳು ಉಪಸ್ಥತರಿದ್ದರು.

## ಸಾಂಸ್ಕೃತಿಕ ಕಾರ್ಯಕ್ರಮ ದಿನಾಂಕ: 18.07.2014

ಸಾಂಸ್ಕೃತಿಕ ಕಾರ್ಯಕ್ರಮ ದಿನಾಂಕ: 18.07.2014 ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಅಜಿತಕುಮಾರ ಸಭಾಭವನದಲ್ಲಿ ದ್ವಿತೀಯ ವಿಭಾಗದವಿದ್ಯಾರ್ಥಿಗಳಿಂದ ಜನಪದ ವೈಭವ ಎಂಬ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯ ರವಿರಾಜ್ ಕಾರ್ಯಕ್ರಮ ಉದ್ಘಾಟಿಸಿದರು. ವಿದ್ಯಾರ್ಥಿಗಳು ವೇದಿಕೆಯನ್ನು ಜನಪದ ಹಿನ್ನೆಲೆಯಲ್ಲಿ ಸಿದ್ಧಗೊಳಿಸಿದ್ದರು.



ಈ ದಿನ ವಿದ್ಯಾರ್ಥಿಗಳು ಜನಪದ ಸಂಸ್ಕೃತಿಯು ಮಾಯವಾಗುತಿರುವಂತಹ ಸಂದರ್ಭದಲ್ಲಿ ಜನಪದ ಕಲೆಗಳನ್ನು ನೆನಪಿಸುವಂತಹ ಹಲವಾರು ಹಾಡು, ನೃತ್ಯ, ನಾಟಕಗಳನ್ನು ಪ್ರದರ್ಶಿಸಿದರು. ವಿಶೇಷವಾಗಿ ಡೊಳ್ಳುಕುಣಿತ, ಅಸ್ಸಾಂ, ಗುಜರಾತ್, ಕೇರಳ, ರಾಜಸ್ತಾನ, ತಮಿಳುನಾಡು, ಉಡುಪಿ ಹೀಗೆ ಹಲವು ರಾಜ್ಯಗಳ ವಿವಿಧ ,ನೃತ್ಯ ಪ್ರದರ್ಶನವನ್ನು ನೀಡಲಾಯಿತು. ನರೇಂದ್ರ ಮೋದಿ ಜನಪದ ಸಂಸ್ಕೃತಿಯ ಉಳಿವಿಕೆಯನ್ನು ಸಮೃದ್ಧವಾಗಿ ರೂಪಿಸಲು ಪ್ರೋತ್ಸಾಹ ನೀಡುವ ಕಾರ್ಯಕ್ರಮವಾಗಿತ್ತು. ಕಾರ್ಯಕ್ರಮವನ್ನು ಉಪನ್ಯಾಸಕಿ ಶ್ರೀಮತಿ ಶೈಲಜಾ ನಿರ್ವಹಿಸಿದರು.

## ಚೆಸ್ ಪಂದ್ಯಾಟ ದಿನಾಂಕ: 18.07.2014

ವಿವೇಕಾನಂದ ಕಾಲೇಜು ನೆಹರುನಗರ ಪುತ್ತೂರಿನಲ್ಲಿ ನಡೆದ ಮಾನ್ಸೂನ್ ಚೆಸ್ ಪಂದ್ಯಾಟದಲ್ಲಿ ವಿದ್ಯಾರ್ಥಿಗಳಾದ ಅವಿನಾಶ್, ತಿಲಕ್‌ರಾಜ್ ತೃತೀಯ ಬಿ.ಬಿ.ಎಂ ಆದಿತ್ಯ,ಹಾಂಗ್ ಚಾಮ್,ವಿವೇಕ್, ಚಂದನ್, ವಿಘ್ನೇಶ್. ಪ್ರಥಮ ಬಿ.ಕಾಂ.(ಎ) ವಿಭಾಗದ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ. ಹಾಗೆಯೇ ತೃತೀಯ ಬಿ.ಕಾಂ. ವಿಭಾಗದ ಶ್ರವಣ್ ಭಾಗವಹಿಸಿರುತ್ತಾರೆ.

## ಪ್ರಜ್ಞಾನ ಸಾಹಿತ್ಯ ಸಂಘ ದಿನಾಂಕ:24.07.2014

### ರಂಗಭೂಮಿ ಆಸಕ್ತಿ ಹಾಗೂ ರಂಗಭೂಮಿ ಮಹತ್ವ ಅವಕಾಶಗಳು

ಪ್ರಜ್ಞಾನ ಸಾಹಿತ್ಯ ಸಂಘದ ಆಶ್ರಯದಲ್ಲಿ



ರಂಗಭೂಮಿ ಆಸಕ್ತಿ ಹಾಗೂ ರಂಗಭೂಮಿ ಅವಕಾಶಗಳು ಎಂಬ ವಿಷಯದ ಬಗ್ಗೆ ರಂಗಭೂಮಿ ಕಲಾವಿದ ಧನರಾಜ್ ಎಸ್.ಆರ್.ಮಾತನಾಡಿದರು.

ರಂಗಭೂಮಿಯ ಚರಿತ್ರಯ ಬಗ್ಗೆ ಮಕ್ಕಳಿಗೆ ಮಾಹಿತಿ ನೀಡಿ ರಂಗಭೂಮಿಯಲ್ಲಿ ಅವಕಾಶಗಳ ಕುರಿತಾಗಿ ಹೇಳಿದರು. ರಂಗಭೂಮಿ ನಾಟಕಗಳು ಬರೇ ನಾಟಕಗಳಾಗಿರದೆ ಜೀವನ ಮೌಲ್ಯಗಳನ್ನು ತಿಳಿಸುವಲ್ಲಿ ಸಹಕಾರಿಯಾಗುತ್ತದೆ ಎಂದರು.

SRI RAMA VIDYAKENDRA TRUST (R.)
HANUMAN NAGAR, KALLADKA
BANTWAL TQ., DAKSHINA KANNADA, KARNATAKA 574 222
Ph.: 08255-275273 / 275183 / 275073 / 275693 / 279673 / 200085 / 279479
Website : **www.srvk.org** E-mail : **info@srvk.org**

ಸವಿಧೇ, BOOK POST

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Kalladka, Bantwal Tq, D.K. and printed at Anagha Digital Square, Kaikamba, B.C. Road.